## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 602 |
| ಮಾನ್ಯ ಸದಸ್ಯರ ಹೆಸರು | ಶ್ರೀ ಕೆ.ಹರೀಶ್ ಕುಮಾರ್ |
| ಉತ್ತರಿಸಬೇಕಾದ ದಿನಾಂಕ | 08.12.2023 |
| ಉತ್ತರಿಸುವ ಸಚಿವರು | ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ದಕ್ಷಿಣಕನ್ನಡ ಜಿಲ್ಲೆಯಲ್ಲಿ 2020 ರಿಂದ 2023ರವರೆಗೆ ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಗಂಗಾ ಕಲ್ಯಾಣ ಯೋಜನೆಯಡಿ ಕೊರೆಯಲಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು; ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ 2020 ರಿಂದ 2022-23 ನೇ ಸಾಲುಗಳಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಪರಿಶಿಷ್ಟ ಪಂಗಡದವರ ಕಲ್ಯಾಣಕ್ಕಾಗಿ ಕೊರೆಯಲಾದ ಕೊಳವೆಬಾವಿಗಳ ವಿವರ ಈ ಕೆಳಕಂಡಂತಿದೆ. |

| ವರ್ಷ | ಆಯ್ಕೆಯಾದ ಫಲಾನುಭವಿಗಳ ಸಂಖ್ಯೆ | ಕೊರೆಯಲಾದ ಕೊಳವೆಬಾವಿಗಳ ಸಂಖ್ಯೆ |
|---|---|---|
| 2020-21 | 60 | 60 |
| 2021-22 | 59 | 0 |
| 2022-23 | 10 | 0 |
| ಒಟ್ಟು | 129 | 60 |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಆ | ಸದರಿ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಕೊಳವೆ ಬಾವಿ ಕೊರೆಯುವ ಸಲುವಾಗಿ ಟೆಂಡರ್ ಪ್ರಕ್ರಿಯೆಯಲ್ಲಿ ಆಯ್ಕೆಯಾದ ಗುತ್ತಿಗೆದಾರರ ಸಂಸ್ಥೆಗಳ ವಿವರ ನೀಡುವುದು; | ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿ ಘಟಕಗಳನ್ನು ನಿರ್ಮಿಸಲು ಆಯ್ಕೆಯಾಗಿರುವ ಗುತ್ತಿಗೆದಾರರ ವಿವರಗಳು ಈ ಕೆಳಕಂಡಂತಿದೆ. |

| ವರ್ಷ | ಟೆಂಡರ್ ಪ್ರಕ್ರಿಯೆಯಲ್ಲಿ ಎಲ್-1 ಆಗಿ ಆಯ್ಕೆಯಾದ ಗುತ್ತಿಗೆದಾರರು |
|---|---|
| 2020-21 | ಮೆ:ಪಂಚಮುಖಿ ಬೋರ್‌ವೆಲ್ಸ್, ರಾಯಚೂರು ಜಿಲ್ಲೆ. |
| 2021-22<br>2022-23 | 1. ಮೆ:ಯಮುನಾ ಡ್ರಿಲ್ಲಿಂಗ್ ಎಂಟರ್ ಪ್ರೈಸಸ್, ಮಂಗಳೂರು.<br>2. ಮೆ:ಯಮುನಾ ಬೋರ್‌ವೆಲ್ಸ್, ದರ್ಬೆ ಪುತ್ತೂರು.<br>3. ಮೆ:ರಾಜ್ ಗ್ರೂಪ್ಸ್, ಉಪ್ಪಿನಂಗಡಿ.<br>4. ಮೆ:ರವಿ ಬೋರ್‌ವೆಲ್ಸ್, ಚಿಕ್ಕಮಗಳೂರು. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಇ | ಸದರಿ ಟೆಂಡರ್ ನಲ್ಲಿ ಇಲಾಖಾಧಿಕಾರಿಗಳು ಅಕ್ರಮವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದು, ಈ ಕುರಿತಂತೆ ಇಲಾಖಾ ಮುಖ್ಯಸ್ಥರು ಅಕ್ರಮವೆಸಗಿದವರ ವಿರುದ್ಧ ದೂರು ದಾಖಲಿಸಿರುವುದರ ಕುರಿತು ಸರ್ಕಾರವು ಕೈಗೊಂಡ ಕ್ರಮಗಳೇನು; (ಮಾಹಿತಿ ಒದಗಿಸುವುದು) | 2018-19ರ ಟೆಂಡರ್ ಗೆ ಸಂಬಂಧಿಸಿದಂತೆ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿನ ಗಂಗಾ ಕಲ್ಯಾಣ ಯೋಜನೆಯಲ್ಲಿ ನಡೆದಿರುವ ಅಕ್ರಮ ಕುರಿತಂತೆ ತನಿಖೆ ನಡೆಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಇವರನ್ನು ತನಿಖಾಧಿಕಾರಿಯನ್ನಾಗಿ ನೇಮಿಸಲಾಗಿದೆ. ಕರ್ನಾಟಕ ಲೋಕಾಯುಕ್ತದಿಂದ ಸಹ ತನಿಖೆ ನಡೆಸಲಾಗುತ್ತಿದೆ.<br><br>ಸದರಿ ಟೆಂಡರ್‌ನಲ್ಲಿ ಗುತ್ತಿಗೆದಾರರು ಅಕ್ರಮವೆಸಗಿರುವುದು ತನಿಖಾ ವರದಿಯಲ್ಲಿ ಕಂಡು ಬಂದಲ್ಲಿ, ಅಂತಹ ಗುತ್ತಿಗೆದಾರರ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು. |
| ಈ | ಸದರಿ ಟೆಂಡರ್‌ನಲ್ಲಿ ಅಕ್ರಮವೆಸಗಿರುವ ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸುವ ನಿಟ್ಟಿನಲ್ಲಿ ಸರ್ಕಾರವು ಕ್ರಮವಹಿಸಿದೆಯೇ? (ವಿವರ ನೀಡುವುದು) | |

ಸಕಇ/265/ಎಸ್‌ಟಿಪಿ /2023

(ಬಿ. ನಾಗೇಂದ್ರ)
ಪರಿಶಿಷ್ಟ ಪಂಗಡಗಳ ಕಲ್ಯಾಣ,
ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು